# ಸೀಮೋಲ್ಲಂಘನ

ಹೊಸ್ತಿಲನ್ನೆಳೆಯುತ್ತಾ ಕೋಣೆಯಲ್ಲೋ, ವರಾಂಡದಲ್ಲೋ ತನ್ನ ಚಟುವಟಿಕೆಗಳನ್ನು ನಡೆಸುತ್ತಿರುವ ಎಳೆಯ ಮಗು ಒಂದು ದಿನ ಇದ್ದಕ್ಕಿದ್ದಂತೆ ಹೊಸ್ತಿಲು ದಾಟಿತೆಂದರೆ ಹೆತ್ತವರಿಗೆ, ಮನೆಯವರಿಗೆ ಸಂಭ್ರಮ! ಹೊಸ್ತಿಲು ದಾಟುವುದೆಂದರೆ ಮಗುವಿನ ಸೀಮೋಲ್ಲಂಘನ; ಪ್ರಾಯಃ ಇದೇ ಮನುಷ್ಯನ ಬದುಕಿನ ಪ್ರಪ್ರಥಮ ಸೀಮೋಲ್ಲಂಘನ. ಹೊಸ್ತಿಲನ್ನು ದಾಟುವುದರ ಮೂಲಕ ಮಗು ತನ್ನ ಸೀಮಿತ ವಲಯವನ್ನು ಮೀರಿ ಮುಂದಕ್ಕೆ ಹೋಗುವ ಸತ್ವ ತನ್ನಲ್ಲಿರುವುದನ್ನು ತಾನೇ ಅರ್ಥ ಮಾಡಿಕೊಳ್ಳುತ್ತದೆ; ಮಾತ್ರವಲ್ಲ, ಜಗತ್ತಿಗೂ ಅದನ್ನು ಸಾಬೀತುಪಡಿಸುತ್ತದೆ. ತಮ್ಮ ಶಕ್ತಿಯನ್ನು ಪ್ರದರ್ಶಿಸುವ ಸಲುವಾಗಿಯೇ ಹಿಂದಿನ ಕಾಲದಲ್ಲಿ ರಾಜ ಮಹಾರಾಜರು ತಮ್ಮ ರಾಜ್ಯಗಳ ಎಲ್ಲೆಯನ್ನು ದಾಟಿ, ಪರರಾಜ್ಯಗಳನ್ನು ಆಕ್ರಮಿಸಿ, ವಶಪಡಿಸಿಕೊಳ್ಳುತ್ತಿದ್ದರು; ತನ್ಮೂಲಕ ತಮ್ಮ ರಾಜ್ಯಗಳನ್ನು ವಿಸ್ತರಿಸಿಕೊಳ್ಳುತ್ತಿದ್ದರು. (ಈಗಲೂ ವಿಜಯದಶಮಿಯಂದು ಇಂಥ ಸೀಮೋಲ್ಲಂಘನದ ಸಾಂಕೇತಿಕ ಆಚರಣೆ ರೂಢಿಯಲ್ಲಿರುವುದನ್ನು ಗಮನಿಸಬಹುದು).

ಆದರೆ ಸೀಮೋಲ್ಲಂಘನ ಅರ್ಥಾತ್ ಗಡಿದಾಟುವಿಕೆ ಎಂಬುದು ಕೇವಲ ಭೌಗೋಳಿಕ ವಿಸ್ತರಣೆಗಷ್ಟೇ ಸೀಮಿತವಲ್ಲ. ಸೃಷ್ಟಿಯಲ್ಲಿನ ಎಲ್ಲ ಜೀವಿಗಳಲ್ಲೂ ತಮ್ಮ ಪ್ರಾಕೃತಿಕ ಮಿತಿಯನ್ನು ಮೀರಿ ಬೆಳೆಯಬೇಕೆಂಬ ತುಡಿತವಿದ್ದೇ ಇರುತ್ತದೆ. ಮನುಷ್ಯನ ಸಂದರ್ಭದಲ್ಲಿ ಈ ತುಡಿತ ಅಪ್ರಜ್ಞಾಪೂರ್ವಕ ಹಾಗೂ ಪ್ರಜ್ಞಾಪೂರ್ವಕ ಎಂಬ ಎರಡೂ ನೆಲೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಶೈಶವ, ಬಾಲ್ಯ, ತಾರುಣ್ಯ, ಕೌಮಾರ್ಯ, ಯೌವನ, ವಾರ್ಧಕ್ಯ– ಈ ವಿವಿಧ ಹಂತಗಳ ಮೂಲಕ ನಮ್ಮ ಬದುಕು ಹಾದು ಹೋಗುತ್ತದೆಯಷ್ಟೆ? ಇಂಥ ಪ್ರತಿಯೊಂದು ಹಂತದ ಗಡಿಯನ್ನು ದಾಟುವಾಗಲೂ ನಮಗರಿವಿಲ್ಲದಂತೆಯೇ ನಾವು ಸೀಮೋಲ್ಲಂಘನ ನಡೆಸಿರುತ್ತೇವೆ. ಅಪ್ರಜ್ಞಾಪೂರ್ವಕವಾಗಿ ನಡೆಯುವ ಸೀಮೋಲ್ಲಂಘನದ ಪರಿಣಾಮವಾಗಿ ನಮ್ಮಲ್ಲಿ ದೈಹಿಕ ಹಾಗೂ ಮಾನಸಿಕ ಪರಿವರ್ತನೆಗಳೂ ಪಲ್ಲಟಗಳೂ ಕಾಣಿಸಿಕೊಳ್ಳುತ್ತವೆ. ಇಂಥ ಗಡಿದಾಟುವ ಪ್ರಕ್ರಿಯೆ ನಡೆಯದಿದ್ದಲ್ಲಿ ನಮ್ಮ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಸಾಧ್ಯವಾಗಲಾರದಲ್ಲವೆ? ಇದು ನಮ್ಮ ಸ್ವಂತ ಪ್ರಯತ್ನಕ್ಕಾಗಿ ಕಾಯದೇ ನೈಸರ್ಗಿಕ ಪ್ರೇರಣೆಯಿಂದ ನಡೆಯುವಂಥದ್ದು. ಸಸ್ಯ ಸಂಕುಲದಲ್ಲಿ ಹಾಗೂ ಪ್ರಾಣಿ ಪಕ್ಷಿ ಕ್ರಿಮಿ ಕೀಟಗಳಲ್ಲಿಯೂ ಇಂಥ ಅಪ್ರಜ್ಞಾಪೂರ್ವಕ ಪರಿವರ್ತನೆ ಘಟಿಸುತ್ತಿರುತ್ತದೆ.

ಮನುಷ್ಯರಾಗಿರುವ ನಾವು ನಮ್ಮ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯವನ್ನು ಕುರಿತು ನಮ್ಮಷ್ಟಕ್ಕೆ ನಾವೇ ಒಂದು ಮಿತಿಯನ್ನು ಕಲ್ಪಿಸಿಕೊಂಡಿರುತ್ತೇವೆ. ಆ ಮಿತಿಯನ್ನು ಮೀರುವುದು ನಮ್ಮ ಪಾಲಿಗೆ ಅಸಾಧ್ಯ ಎಂದು ನಂಬಿರುತ್ತೇವೆ. ಆದರೆ ಸಮಯ ಸಂದರ್ಭಗಳ ಒತ್ತಡದಿಂದಲೋ, ಅನಿವಾರ್ಯ ಕಾರಣದಿಂದಲೋ ಪ್ರಜ್ಞಾಪೂರ್ವಕವಾಗಿ ನಾವು ನಮ್ಮ ಮಿತಿಗಳನ್ನು ದಾಟಲೇಬೇಕಾದಾಗ ನಮ್ಮಲ್ಲಿರುವ ಪ್ರಚ್ಛನ್ನ ಶಕ್ತಿಯ ಅರಿವು ನಮಗುಂಟಾಗುತ್ತದೆ. ನಮಗೆ ನಾವೇ ಹಾಕಿಕೊಂಡ ಗಡಿಯನ್ನು ದಾಟಿ ನಮ್ಮ ಪರಿಧಿಯನ್ನು ವಿಸ್ತರಿಸಿಕೊಂಡಾಗ ನಮ್ಮ ಬದುಕಿನಲ್ಲಿ ಪ್ರಗತಿ ಕಾಣಿಸಿಕೊಳ್ಳುತ್ತದೆ. ಮನುಷ್ಯ ತನ್ನ ಆದಿಮ ಸ್ಥಿತಿಯಿಂದ ಆಧುನಿಕ ಸ್ಥಿತಿಗೆ ಬಂದ ಹಾದಿಯಲ್ಲಿ ಇಂಥ ಅಸಂಖ್ಯಾತ ಸೀಮೋಲ್ಲಂಘನಗಳಾಗಿರುವುದನ್ನು ನಾಗರಿಕತೆಯ ಇತಿಹಾಸ ದಾಖಲಿಸಿದೆ. ಅಮೆರಿಕಾದ ಗಗನಯಾತ್ರಿ ನೀಲ್ ಆರ್ಮ್‌ಸ್ಟ್ರಾಂಗ್ ಮೊಟ್ಟ ಮೊದಲಬಾರಿಗೆ ಚಂದ್ರನ ಮೇಲೆ ಹೆಜ್ಜೆಯಿಟ್ಟಾಗ **'That's one small step for man, one giant leap for mankind'** ಎಂದು ಉದ್ಗರಿಸುವಂತಾದುದು ಇಂಥ ಸೀಮೋಲ್ಲಂಗನಗಳ ಅದ್ಭುತ ಫಲಿತಾಂಶಗಳಲ್ಲಿ ಒಂದು.

ಮನುಷ್ಯನ ಅಂತರಂಗದಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಬಂಡಾಯ ಪ್ರವೃತ್ತಿಯೊಂದು ಸೂಕ್ಷ್ಮವಾಗಿ ಮಿಸುಕಾಡುತ್ತಿರುತ್ತದೆ. ಕೆಲವರಲ್ಲಿ ಅದು ಸ್ಪಷ್ಟವಾಗಿ ಪ್ರಕಟವಾಗುತ್ತದೆ. ಈ ಪ್ರವೃತ್ತಿಯ ಪರಿಣಾಮವಾಗಿ ಮನುಷ್ಯ ಜಾತಿ, ಮತ, ಕಟ್ಟುಕಟ್ಟಳೆಗಳ ಬೇಲಿಗಳನ್ನು ಮುರಿದು ಮುನ್ನುಗ್ಗುವ ಕೆಲಸ ಮಾಡುತ್ತಾನೆ. ಇಂಥ ಸೀಮೋಲ್ಲಂಘನಗಳಿಂದ ಒಳಿತು ಮತ್ತು ಕೆಡುಕು– ಎರಡೂ ಘಟಿಸಬಹುದು; ಸಾಮಾಜಿಕ ವ್ಯವಸ್ಥೆಗಳಲ್ಲುಂಟಾಗುವ ಏರುಪೇರುಗಳಿಂದ ಸಾಮಾಜಿಕ ಸ್ವಾಸ್ಥ್ಯದಲ್ಲಿ ವ್ಯತ್ಯಯವಾಗಬಹುದು; ಕಟ್ಟುಪಾಡುಗಳಿಂದ ಜಡವಾಗಿದ್ದ ಮನುಷ್ಯ ಲೋಕದಲ್ಲಿ ಚಲನಶೀಲತೆ ಕಾಣಿಸಿಕೊಂಡು, ಹೊಸ ಚಿಂತನೆಗಳು ಹುಟ್ಟಿಕೊಳ್ಳಲೂಬಹುದು. ಇತಿಹಾಸದಲ್ಲಿ ದಾಖಲಾಗಿರುವ ಕ್ರಾಂತಿಗಳೂ, ಪಲ್ಲಟಗಳೂ– ಒಟ್ಟಿನಲ್ಲಿ ಮನುಷ್ಯನ ಬದುಕಿನ ಪತನ ಅಭ್ಯುದಯಗಳೆಲ್ಲವೂ– ಈ ಬಗೆಯ ಗಡಿದಾಟುವಿಕೆಯ ಪರಿಣಾಮಗಳೇ. ಭಾರತದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವೂ ಇಂಥ ಸಮಷ್ಟಿ ಸೀಮೋಲ್ಲಂಘನ ಕ್ರಿಯೆಗಳಲ್ಲಿ ಒಂದು. ಅಖಂಡ ಭಾರತ ಎಲ್ಲ ಭೇದಗಳನ್ನೂ ಮರೆತು ಏಕವ್ಯಕ್ತಿಯಂತೆ; –ಎಲ್ಲ ಅಡ್ಡಿ ಅಡಚಣೆಗಳನ್ನು ಮೀರಿ ಮುನ್ನುಗ್ಗುವ ಜಲರಾಶಿಯಂತೆ– ಪಾರತಂತ್ರ್ಯದ ಗಡಿದಾಟಲು ಹೋರಾಡಿ ಯಶಸ್ವಿಯಾಯಿತು. ಜಗತ್ತಿನ ಇತಿಹಾಸದಲ್ಲೇ ಇದೊಂದು ಮಹತ್ವಪೂರ್ಣ ಸೀಮೋಲ್ಲಂಘನವೆಂದರೆ ಅತ್ಯುಕ್ತಿಯಲ್ಲ.

ಒಟ್ಟಿನಲ್ಲಿ ಮನುಷ್ಯನ ಬದುಕು ಚಲನಶೀಲವಾಗಲು; ವಿಸ್ತೃತಗೊಳ್ಳಲು ಮತ್ತೆ ಮತ್ತೆ ಸೀಮೋಲ್ಲಂಘನಗಳು ಘಟಿಸುತ್ತಲೇ ಇರಬೇಕು.

**ವೈನತೇಯ**

## ಮಾತೇ ಮುತ್ತು

★ ಅನಂತ ಅಲೋಕ ನಕ್ಷತ್ರ, ಗಾಢ ಅಂಧಕಾರ ಮುಸುಕಿದ ನಂತರವೇ ಹೆಚ್ಚು ಪ್ರಕಾಶದಿಂದ ಕಂಗೊಳಿಸುತ್ತದೆ.
–ಕಾಳಿದಾಸ

★ ಬಹಳಷ್ಟು ತಪ್ಪುಗಳನ್ನು ಮಾಡದೆ ಯಾರೂ ದೊಡ್ಡ ವ್ಯಕ್ತಿ ಅಥವಾ ಮಹಾಪುರುಷ ಆಗಲಾರ.
–ಮದರ್ ಥೆರೇಸಾ

★ ವಿವೇಕಿಯಾದವ ಬೇರೆಯವರ ತಪ್ಪನ್ನು ಕಂಡು ತನ್ನ ತಪ್ಪನ್ನು ಸರಿಪಡಿಸಿಕೊಳ್ಳುತ್ತಾನೆ.
–ಸ್ವಾಮಿ ವಿವೇಕಾನಂದ

★ ಅಸತ್ಯವನ್ನು ತಿಳಿಯುವುದು, ಸತ್ಯವನ್ನು ಕಾಣುವುದು ಜ್ಞಾನದ ಮುಖ್ಯ ವಿಶೇಷ.
–ಬಂಕಿಮಚಂದ್ರ

★ ಉದ್ದೇಶ ಸರಿ ಇಲ್ಲದಿದ್ದರೆ ಜ್ಞಾನ ಪಾಪವಾಗುತ್ತದೆ.
–ಪಾಟೀಲ ಪುಟ್ಟಪ್ಪ

★ ಮನುಷ್ಯನ ಅತ್ಯುನ್ನತ ಭಾವನೆಗಳಿಗೆ ವಾಹಕವಾಗುವುದು ಸಂಗೀತ. ಅದು ಬದುಕಿನ ಕಷ್ಟಗಳನ್ನು ಕ್ಷಣ ಕಾಲವಾದರೂ ಮರೆಸಿ ಸಮಾಧಾನ ಉಂಟುಮಾಡುತ್ತದೆ.
–ಟಿ.ಚೌಡಯ್ಯ

★ ನೀವು ಮುಂದೆ ಹೋಗಬೇಕೆಂದಿದ್ದರೆ ಬೇರೆಯವರ ತಪ್ಪುಗಳಿಂದ ಕಲಿತ ಪಾಠಗಳನ್ನು ಸಮಯೋಚಿತವಾಗಿ ಉಪಯೋಗಿಸಬೇಕು.
–ಬಿ.ಆರ್. ಅಂಬೇಡ್ಕರ್

★ ವಿಚಾರಗಳಿಗೆ ವಿಶಾಲವಾದ ಜೀವನವಿರುತ್ತದೆ. ವಿಚಾರಗಳನ್ನು ಜೀವಂತವಾಗಿರಿಸಲು ಮನುಷ್ಯ ಪ್ರಾಣ ತ್ಯಾಗ ಮಾಡುತ್ತಾನೆ. ಚಿಂತಕರ ಮರಣದಿಂದ ವಿಚಾರಗಳ ಸಮೃದ್ಧಿಯಾಗಬಹುದು.
–ಸಿಸ್ಟರ್ ನಿವೇದಿತಾ

★ ಅಹಂಕಾರದ ಅರ್ಥವೆಂದರೆ ಸಂಗ್ರಹಿಸುವುದು, ಸಂಚಯಿಸುವುದು. ಅದು ಸದಾ ಬೇಕು ಬೇಕು ಎನ್ನುತ್ತಿರುತ್ತದೆ.
–ರವೀಂದ್ರನಾಥ ಠಾಕೂರ್

★ ನಮ್ಮ ಪಾಪಗಳ ಮೇಲೆ ಪರದೆ ಎಳೆಯುವುದು ಭವಿಷ್ಯದ ಮೇಲೆ ಪರದೆ ಎಳೆದಂತೆ.
–ಶಂಕರಾಚಾರ್ಯ

★ ಬುದ್ಧಿವಂತರೂ ಕೆಲವೊಮ್ಮೆ ಲಾಭದಾಸೆಗೆ ಮರುಳಾಗಿ ಮೂರ್ಖರಾಗುತ್ತಾರೆ.
–ಸಾ.ಶಿ.ಮರುಳಯ್ಯ

★ ಯಾರಲ್ಲಿ ಪ್ರಜ್ಞೆ ಇರುತ್ತದೆಯೋ, ಅವನು ಎಂದೂ ಗರ್ವ ಪಡುವುದಿಲ್ಲ.
–ಶೇಖ್ ಸಾದಿ

★ ಅನುಭವದ ಕೊರತೆ ಮತ್ತು ಅಜ್ಞಾನದಿಂದ ಕೆಲಸ ಕೆಡುತ್ತದೆ, ಅಪಾಯ ಎದುರಾಗುತ್ತದೆ.
–ತಿರುಮಲೆ ರಾಜಮ್ಮ